ಸ್ತ್ರೀ ಸೇನಾನಿ

ನಿಯೋಜನೆಗೆ ಅಡ್ಡಿ ಎಂಬ ಟಿಪ್ಪಣಿಯನ್ನೂ ನ್ಯಾಯಾಲಯಕ್ಕೆ ಸಲ್ಲಿಸಿ ಸರ್ಕಾರ ತನ್ನ ಕಾಲೆಳೆದು ನಿಂತಿತ್ತು.

ಸರ್ಕಾರದ ವಾದಕ್ಕೆ ಸುಪ್ರೀಂ ಕೋರ್ಟ್ ಕಿಡಿಕಾರಿದೆ. 'ಮಹಿಳೆ ಅಡುಗೆ ಮನೆಗೆ ಸೀಮಿತ' ಎಂಬ ಭಾವನೆ ಬಿಡಿ ಎಂದು ಹೇಳಿದೆ. ಕೇಂದ್ರ ಸರಕಾರವನ್ನು ಕಟುವಾಗಿ ತರಾಟೆಗೆ ತೆಗೆದುಕೊಂಡಿದೆ. 'ಸೇನೆಯಲ್ಲಿ ನಿಜವಾದ ಸಮಾನತೆ ಜಾರಿಗೆ ಬರಬೇಕಿದ್ದರೆ ಮನಃಸ್ಥಿತಿಯಲ್ಲಿಯೇ ಬದಲಾವಣೆ ಆಗಬೇಕಿದೆ' ಎಂದು ಸ್ಪಷ್ಟವಾಗಿ ಹೇಳಿದೆ.

ಸರ್ಕಾರ ಕೊಟ್ಟ ಕಾಲೆಳೆಯುವ ಕಾರಣಗಳನ್ನೆಲ್ಲ 'ಸೆಕ್ಸ್ ಸ್ಟೀರಿಯೋಟೈಪ್' ಎಂದು ಘೋಷಿಸಿ, ಸುಪ್ರೀಂ ಕೋರ್ಟಿನ ಆದೇಶವನ್ನು ಜಾರಿಗೆ ತರಲು ಕೇಂದ್ರ ಸರ್ಕಾರಕ್ಕೆ ಮೂರು ತಿಂಗಳ ಕಾಲಾವಕಾಶ ನೀಡಿದೆ.

ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ನೀಡಿಲ್ಲ ಎಂದು 2011ರ ಸೆಪ್ಟೆಂಬರ್ 2ರಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತ್ತು. ಆದರೂ, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಆದೇಶವನ್ನು ಸರ್ಕಾರ ಪಾಲಿಸಿಲ್ಲ ಎಂದು ನ್ಯಾಯಪೀಠವು ಮತ್ತಷ್ಟು ಅಸಮಾಧಾನವನ್ನು ಹೊರ ಹಾಕಿದೆ.

'ಕಾಯಂ ಸೇವೆ ಹುದ್ದೆಗಳಿಗೆ ಮಹಿಳೆಯರನ್ನು ನೇಮಿಸುವುದಕ್ಕೆ ಅವರ ಶಾರೀರಿಕ ಮಿತಿಗಳು ಅಡ್ಡಿ ಎಂಬುದು ಸಮರ್ಥನೀಯವಲ್ಲ. ಪುರುಷ ಸಹೋದ್ಯೋಗಿಗಳ ಹೆಗಲಿಗೆ ಹೆಗಲು ಕೊಟ್ಟು ದುಡಿದು, ಸೇನಾಪಡೆಯು ಹೆಮ್ಮೆಪಡುವಂತೆ ಮಹಿಳಾ ಸಿಬ್ಬಂದಿಯೂ ಮಾಡಿದ್ದಾರೆ. ಅದಲ್ಲದೆ, ಮಹಿಳೆಯರಿಗೆ ಅವಕಾಶಗಳನ್ನು ನಿರಾಕರಿಸಿದರೆ ಸಂವಿಧಾನದ 14ನೇ ವಿಧಿಯು ನೀಡಿರುವ ಸಮಾನತೆಯ ಖಾತರಿಯನ್ನು ಉಲ್ಲಂಘಿಸಿದ ಹಾಗೆ ಆಗುತ್ತದೆ' ಎಂದು ಪೀಠವು ಸ್ಪಷ್ಟವಾಗಿ ಹೇಳಿದೆ.

ಸೆಪ್ಟೆಂಬರ್ 1994, ಫ್ಲೈಟ್ ಕ್ಯಾಡೆಟ್ ಹರಿತಾ ಕೌರ್ ದೆಯೋಲ್, ಬೆಂಗಳೂರಿನ ಯಲಹಂಕ ಏರ್‌ಫೋರ್ಸ್ ಸ್ಟೇಶನ್‌ನಲ್ಲಿ ಆವ್ರೋ ವಿಮಾನವನ್ನು ಏಕಾಂಗಿಯಾಗಿ ಹಾರಿಸುವ ಮೂಲಕ ವಾಯುಪಡೆಯ ಮೊಟ್ಟಮೊದಲ ಚಾಲಕಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು.



## ಪುಡಿಯಾಗದ 'ಗ್ಲಾಸ್ ಸೀಲಿಂಗ್'

ಮಹಿಳೆಯರಿಗೆ ಸ್ಥಾನ ನಿರಾಕರಿಸಲು ಸರ್ಕಾರ ನೀಡಿದ ಕಾರಣಗಳೇನು ಗೊತ್ತೆ?

'ಕಮಾಂಡರ್ ಹುದ್ದೆಗಳಿಗೆ ಮಹಿಳೆಯರು ಸೂಕ್ತರಲ್ಲ. ಯಾಕೆಂದರೆ, ಸೇನೆಯ ಪ್ರಮುಖ ಹುದ್ದೆಗಳಲ್ಲಿ ಪುರುಷರೇ ಇರುತ್ತಾರೆ. ಮಹಿಳಾ ಅಧಿಕಾರಿಯ ಆದೇಶವನ್ನು ಪಾಲಿಸುವ ರೀತಿಯಲ್ಲಿ ಸೇನಾಪಡೆಗಳು ಇನ್ನೂ ಮಾನಸಿಕವಾಗಿ ಸಿದ್ಧವಾಗಿಲ್ಲ'.

ಈ ವಿವರಣೆ ಹೇಗಿದೆ ನೋಡಿ. ಪುರುಷರ ಮಿತಿಗೆ ಮಹಿಳೆಯರಿಗೆ ಶಿಕ್ಷೆ. ಇದು ಸರಕಾರ ಕೊಟ್ಟ ಲಿಖಿತ ವಿವರಣೆ!

ಕಾನೂನು ಮಿತಿ ಇಲ್ಲದೆಯೂ, ಲಿಖಿತವಾಗಿ ನೀಡದಿದ್ದರೂ, ಮಿಲಿಟರಿ ಸೇರಿದಂತೆ ಬಹಳಷ್ಟು ಸಾರ್ವಜನಿಕ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮ ಹುದ್ದೆಯಲ್ಲಿ ಕಮಾಂಡ್ ಮಾಡುವ ಸ್ಥಾನಗಳಿಗೆ ಬಡ್ತಿಯಾಗದೆ ಇರಲು ಕಾರಣ, ಮಹಿಳೆಯರಲ್ಲಿ ಇರುವ ಕುಂದು ಕೊರತೆಗಳಲ್ಲ. ಇಂತಹುದೇ ಆದ ಪುರುಷ ಪ್ರಧಾನ ಮೈಂಡ್‌ಸೆಟ್.

ಸೇನೆಗೆ ಮಿಲಿಟರಿ ಹೆಲಿಕಾಪ್ಟರ್ ಮತ್ತು ಯುದ್ಧದ ವಿಮಾನಗಳನ್ನು ತಯಾರಿಸುವ ಎಚ್.ಎ.ಎಲ್.ನಲ್ಲಿ ಮೂರೂವರೆ ದಶಕ ದುಡಿದ ನನಗೆ ಇಂತಹ ಮೈಂಡ್‌ಸೆಟ್ ಮತ್ತಷ್ಟು ಸ್ಪಷ್ಟವಾಗಿ ಅರ್ಥವಾಗುತ್ತದೆ. 1940ರಲ್ಲಿ ಸ್ಥಾಪಿತವಾದ ಈ ನಮ್ಮ ಡಿಫೆನ್ಸ್ ಪಬ್ಲಿಕ್ ಸೆಕ್ಟರ್‌ನಲ್ಲಿ, ನಾವು ಇಬ್ಬರು ಮಹಿಳೆಯರು ಜನರಲ್ ಮ್ಯಾನೇಜರ್ ಹುದ್ದೆಗೆ ಏರುವ ಹೊತ್ತಿಗೆ ಇಸವಿ 2015 ಆಗಿತ್ತು! ತೇನ್‌ಮೋಳಿಯವರು ಮೊದಲ ಮಹಿಳಾ



ವಾಯುಸೇನೆಯಲ್ಲಿ ಮಹಿಳೆಯರು